# ನೀಲ ನಕಾಶೆ

| ಕ್ರ ಸಂ | ಪಾಠದ ಹೆಸರು | ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವ.ನಿ | ಕಿ. ಉ.೧ | ದೀ. ಉ.೨ | ವ.ನಿ | ಕಿ. ಉ೨ | ದೀ. ಉ.೧ | ದೀ. ಉ.೨ | ಕಿ. ಉ೨ | ದೀ. ಉ.೧ | ದೀ. ಉ.೨ | ದೀ. ಉ.೩ | ದೀ. ಉ.೨ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
| ೧ | ಯುದ್ಧ | | ೧(೧) | | | ೨(೧) | ೩(೧) | | | | | | | ೬ | ೩ |
| ೨ | ಶಬರಿ | | ೧(೧) | | | ೨(೧) | | | | ೩(೧) | | | | ೬ | ೩ |
| ೩ | ಲಂಡನ್ ನಗರ | | ೧(೨) | | | ೨(೧) | | | | ೩(೧) | | | | ೭ | ೪ |
| ೪ | ಭಾಗ್ಯಶಿಲ್ಪಿ | | ೧(೧) | | | ೨(೧) | | | | | ೪(೧) | | | ೭ | ೩ |
| | ಒಟ್ಟು | | ೧(೫) | | | ೨(೪) | ೩(೧) | | | ೩(೨) | ೪(೧) | | | ೨೬ | ೧೩ |
| | | | | | | | | | | | | | | | |
| ೧ | ಸಂಕಲ್ಪಗೀತೆ | | ೧(೧) | | | ೨(೧) | | | | | | | ೪(೧) | ೭ | ೩ |
| ೨ | ಹಕ್ಕಿ ಹಾರುತಿದೆ ನೋಡಿದಿರಾ | | ೧(೨) | ೪(೧) | | | ೩(೧) | | | | | | | ೭ | ೨ |
| ೩ | ಹಲಗಲಿ ಬೇಡರು | | ೧(೧) | | | ೨(೧) | | | | ೩(೧) | | | | ೭ | ೩ |
| ೪ | ಕೌರವೇಂದ್ರನ ಕೊಂದೆನೀನು | | | | | | | | | ೩(೧) | ೪(೧) | | | ೭ | ೨ |
| | ಒಟ್ಟು | | ೧(೪) | ೪(೧) | | ೨(೨) | ೩(೧) | | | ೩(೨) | ೪(೧) | | ೪(೧) | ೨೮ | ೧೦ |
| ೧ | ಅಪಠಿತಗದ್ಯ | | | | | | | ೪(೧) | | | | | | ೪ | ೧ |
| | ಒಟ್ಟು | | | | | | | ೪(೧) | | | | | | ೪ | ೧ |
| ೧ | ಸ್ವಾಮಿ ವಿವೇಕಾನಂದರ ಚಿಂತನೆಗಳು | | | | | ೨(೧) | | | ೨(೧) | | | | | ೪ | ೨ |
| ೨ | ವಸಂತ ಮುಖ ತೋರಲಿಲ್ಲ | | ೧(೧) | | | | | | | | | | | ೧ | ೧ |
| ೩ | ಭಗತ್ ಸಿಂಗ್ | | | | | ೨(೧) | | | ೨(೧) | | | | | ೪ | ೨ |
| | ಒಟ್ಟು | | ೧(೧) | | | ೨(೨) | | | ೨(೨) | | | | | ೯ | ೫ |
| ೧ | ವ್ಯಾಕರಣ | ೧(೧೨) | | | ೧(೨) | | | | | | | | | ೧೪ | ೧೪ |
| ೨ | ಛಂದಸ್ಸು | | | | | | ೩(೧) | | | | | | | ೩ | ೧ |
| ೩ | ಅಲಂಕಾರ | | | | | | ೩(೧) | | | | | | | ೩ | ೧ |
| ೪ | ಗಾದೆಗಳು | | | | | | ೩(೧) | | | | | | | ೩ | ೧ |
| ೫ | ಪತ್ರ ಲೇಖನ | | | | | | | | | | | ೫(೧) | | ೫ | ೧ |
| ೬ | ಪ್ರಬಂಧ ರಚನೆ | | | | | | | | | | | ೫(೧) | | ೫ | ೧ |
| | ಒಟ್ಟು | | | | | | ೩(೩) | | | | | ೫(೨) | | ೧೯ | ೫ |
| | ಶೇಕಡಾ ಪ್ರಮಾಣ | ೨೫ | | | ೩೭ | | | | ೩೪ | | | ೪ | | ೧೦೦ | ೪೯ |

**ಸೂಚನೆ : ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ ಮತ್ತು * ಅಪಠಿತ ಗದ್ಯದಲ್ಲಿ ೨ ಅಂಕಗಳ ೨ ಪ್ರಶ್ನೆಗಳಿರುತ್ತಿದ್ದರೂ**

**೪ ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ.**

Scanned by CamScanner

ಸರ್ಕಾರಿ ಪ್ರೌಢ ಶಾಲೆ ದೊಡ್ಡಕೊತ್ತಗೆರೆ. ಮಂಡ್ಯ ಉತ್ತರ ವಲಯ.

ಅರ್ಧವಾರ್ಷಿಕ ಪರೀಕ್ಷೆ ಸೆಪ್ಟಂಬರ್– ೨೦೧೭

ಅವಧಿ : ೩ ಗಂಟೆಗಳು ೧೦ನೇತರಗತಿ ಪ್ರಥಮ ಭಾಷೆ ಕನ್ನಡ ಗರಿಷ್ಠ ಅಂಕ : ೧೦೦

ಸೂಚನೆಗಳು : ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.
ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.
ಪ್ರತಿ ಪ್ರಶ್ನೆಗೂ ಉತ್ತರಕ್ಕಾಗಿ ಮೀಸಲಿಟ್ಟ ಜಾಗದಲ್ಲೇ ಉತ್ತರ ಬರೆಯುವುದು ಖಡ್ಡಾಯ

ಭಾಗ – 'ಎ'

ಅ)..ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೯ * ೧ = ೯

೧. ರಾಹಿಲ್ ಯಾರು ?

೨. 'ಶಬರಿ' ಗೀತನಾಟಕದ ಕರ್ತೃ ಯಾರು?

೩. ನದೀಜಲಗಳು ಏನಾಗಿವೆ?

೪. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?

೫ ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?

೬. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?

೭. ಹಲಗಲಿಯ ನಾಲ್ವರು ಪ್ರಮುಖರು ಯಾರು?

೮. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?

೯. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

ಆ)ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ ೧೦ * ೨ = ೨೦

೧೦. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?

೧೧. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?।

೧೨. ಪೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?

೧೩. ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?

೧೪. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

೧೫. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?

೧೬. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು, ಏಕೆ?

೧೭. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

೧೮. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?

೧೯. ಪುಟ್ಟ ಬಾಲಕ ಜಲಿಯನ್ ವಾಲಾಬಾಗ್ ತಲುಪಿ ಹಿಂದಿರುಗಿದ ಬಗೆ ವಿವರಿಸಿ.

Scanned by CamScanner

ಐ) ಈ ಕೆಳಗಿನ ಮೊದಲೆರಡು ಪದಗಳ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. ೪ * ೧ = ೪

೪೧. ಸ್ವರಗಳು : ೧೩ : : ಯೋಗವಾಹಗಳು : ______________

೪೨ . ದೀರ ಶೂರ : ಜೋಡುನುಡಿ : : ನಮೋ ನಮೋ : ______________

೪೩. ಗುಣ ಸಂದಿ ,: ಸ್ವರಸಂಧಿ : : ಅನುನಾಸಿಕ ಸಂಧಿ :______________

೪೪. ಕಾವ್ಯ : ಕಬ್ಬ : : ವ್ಯಾಪಾರಿ : ______________

ಒ) ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. ೧*೩=೩

೪೫. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥

ಅಥವಾ

ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ

ಓ) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. ೧ * ೩ =೩

೪೬. ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ.

ಅಥವಾ

ಮಾರಿಗೌತಣವಾಯ್ತು ನಾಳಿನ ಭಾರತವು

ಭಾಗ – 'ಸಿ'

.ಔ) ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧ * ೩ = ೩

೪೭ * ಮಾತೆ ಮುತ್ತು; ಮಾತೆ ಮೃತ್ಯು
* ಕೂಡಿಬಾಳಿದರೆ ಸ್ವರ್ಗ ಸುಖ
* ಕೈ ಕೆಸರಾದರೆ ಬಾಯಿ ಮೊಸರು

ಅಂ)೪೮. ನಿಮ್ಮನ್ನು ಕುಂದಾಪುರದ ವಿವೇಕಾನಂದ ಪ್ರೌಢ ಶಾಲೆಯ ಆಕಾಶ/ಪ್ರಗತಿ ಎಂದು ಭಾವಿಸಿಕೊಂಡು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಕುರಿತುಸಂಬಂಧಪಟ್ಟ ಪಂಚಾಯಿತಿಗೆ ಅಧಿಕಾರಿಗಳಿಗೆ ಮನವಿಪತ್ರ ಬರೆಯಿರಿ.

೧ * ೫ = ೫

ಅಥವಾ

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆಯ ಸಾವಿತ್ರಿ/ಸಾಗರ್ ಎಂದು ಭಾವಿಸಿಕೊಂಡು ಹಾಸನದಲ್ಲಿ ವಾಸವಾಗಿರುವ ತಾಯಿಯವರಿಗೆ ವಿದ್ಯಾಭ್ಯಾಸದ ಪ್ರಗತಿಯನ್ನು ವಿವರಿಸಿ ಪತ್ರ ಬರೆಯಿರಿ .

ಅಃ) ೪೯. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. ೧ * ೫ = ೫

* ಗ್ರಂಥಾಲಯ ಮಹತ್ವ
* ರಾಷ್ಟ್ರೀಯ ಹಬ್ಬಗಳ ಮಹತ್ವ
* ಹಳೆಯ ನೋಟು ನಿಷೇದ ಅನುಕೂಲ ಮತ್ತು ಅನನುಕೂಲಗಳು

ವಿಷಯ ಶಿಕ್ಷಕರು : ಲಗಮಣ್ಣಾ. ನಾವಿ.

Scanned by CamScanner

ಎ) ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ ೪(೨+೨)

೩೦. ತಲೆಯಮೇಲೊಂದು ಅಂದವಾಗಿ ಶಿಸ್ತಿನಿಂದ ಸುತ್ತಿದ ಕಾವಿಬಣ್ಣದ ಪಟಗಾ, ಹಣೆಯಲ್ಲಿ ಸದಾ ಎದ್ದುಕಾಣುವ ವಿಭೂತಿ, ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿಮಾಲೆ, ಕೊಂಚವೇ ಬಾಗಿದ ಕತ್ತು, ಕೈಯಲ್ಲೊಂದು ಊರುಗೋಲು– ಪುಟ್ಟರಾಜರು ಎಂದರೆ ಕಣ್ಣಿನ ಮುಂದೆ ನಿಲ್ಲುವ ಚಿತ್ರ ಇದು.ಎಲ್ಲೆಯಿರದ ಸೇವಾಕ್ಷೇತ್ರ ಇವರದಾಗಿದ್ದರೂ ಸರಳ ಜೀವಿ. ಸಂಗೀತಲೋಕವನ್ನು ತಮ್ಮ ಹೊಸಹೊಸ ರಾಗಗಳಿಂದ ಶ್ರೀಮಂತಗೊಳಿಸಿದ ವಾಗ್ಗೇಯಕಾರ, ಹಲವು ಪ್ರಕಾರಗಳ ವಾದ್ಯಪ್ರವೀಣ, ಶ್ರೇಷ್ಠ ಸಾಹಿತಿ, ಸಮಾಜ ಚಿಂತಕ, ನಾಟಕರಂಗವಿಹಾರಿ, ಶೈಕ್ಷಣಿಕಕ್ಷೇತ್ರದ ಸಾಧಕ, ಆಧ್ಯಾತ್ಮಿಕ ಗುರು– ಇದು ಅವರ ಸಂಕ್ಷಿಪ್ತ ಪರಿಚಯ. ಇಂತಹ ಮಹಿಮಾವಂತರಿಂದ ಪಾವನಗೊಂಡ ಊರು ಹಾವೇರಿ ಜಿಲ್ಲೆಯ ದೇವಗಿರಿ. ಇವರ ಜನನ ೦೩–೦೩–೧೯೧೪ರಲ್ಲಿ ಆಯಿತು. ತಂದೆ ರೇವಣ್ಣಯ್ಯ, ತಾಯಿ ಸಿದ್ದಮ್ಮ. ಆರು ತಿಂಗಳ ಕೂಸು ಆಗಿರುವಾಗಲೇ ವಿಧಿಯು ಬಾಲಕನ ದೃಷ್ಟಿಯನ್ನು ಕಸಿದುಕೊಂಡಿತ್ತು. ಆದರೆ ಇದೇ ಮುಂದಿನ ದಿನಗಳಲ್ಲಿ ತನ್ನಂತಹ ಕಣ್ಣು ಕಳೆದುಕೊಂಡ ಸಹಸ್ರಾರು ನತದೃಷ್ಟರ ಬದುಕನ್ನು ಸುಂದರಗೊಳಿಸಲು ಕಾರಣವಾಯಿತು. ಪುಟ್ಟಯ್ಯನಲ್ಲಿದ್ದ ಸಂಗೀತದ ಆಸಕ್ತಿಯನ್ನು ಗಮನಿಸಿದ ಪಂಚಾಕ್ಷರಿ ಗವಾಯಿಯವರು ತಮ್ಮ ಶಿಷ್ಯನಿಗೆ ಸಂಗೀತದ ಶಿಕ್ಷಣ ಕೊಡಿಸಿದ್ದಲ್ಲದೆ, ಕನ್ನಡ ಮತ್ತು ಸಂಸ್ಕೃತ ಸಾಹಿತ್ಯದ ಪರಿಚಯವನ್ನೂ ಮಾಡಿಸಿದರು.

ಪ್ರಶ್ನೆಗಳು :

೧. ಪುಟ್ಟರಾಜರ ಜೀವನದ ಬಗ್ಗೆ ಬರೆಯಿರಿ.

೨. ಪುಟ್ಟರಾಜರ ವೇಷಭೂಷಣ ಮತ್ತು ಸೇವೆ ಸಲ್ಲಿಸಿದ ಕ್ಷೇತ್ರಗಳು ಯಾವುವು?

## ಭಾಗ – 'ಬಿ'

ಎ) ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೧೦ * ೧ = ೧೦

೩೧. 'ಮಾತಂತು' ಸಂಧಿಗೆ' ಉದಾಹರಣೆಯಾದ ಪದ

(ಎ) ಲೋಪ (ಬಿ)ಆದೇಶ (ಸಿ)ಆಗಮ (ಡಿ)ಯವುದೂಅಲ್ಲ

೩೨. ದಾಶರಥಿ ಯಾರು? ಈ ಚಿಹ್ನೆಯನ್ನು ಬಳಸಲಾಗಿದೆ

(ಎ) ವಿವರಣಾತ್ಮಕ ಚಿಹ್ನೆ (ಬಿ) ಆವರಣ (ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ

೩೩ .' ಸಾಕು ' ಈ ಪದ

(ಎ) ಸಾಮಾನ್ಯಾರ್ಥಕಾವ್ಯಯ (ಬಿ)ಅನುಕರಣಾವ್ಯಯ (ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

೩೪. 'ಮೈ ಮುಚ್ಚು ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ದ್ವಂದ್ವ (ಬಿ) ಕ್ರಿಯಾ (ಸಿ)ದ್ವಿಗುಸಮಾಸ (ಡಿ) ಗಮಕ

೩೫ . ' ಲೋಕದೊಳ್ ' ಪದವು ಈ ವಿಭಕ್ತಿಯಲ್ಲಿದೆ.

(ಎ) ಪ್ರಥಮಾ (ಬಿ) ದ್ವಿತೀಯಾ (ಸಿ) ತೃತೀಯಾ (ಡಿ) ಸಪ್ತಮಿ

೩೬ . ' ನಾನು ' ಪದ ಉದಾಹರಣೆಯಿದು

(ಎ) ಪ್ರಶ್ನಾರ್ಥಕ (ಬಿ)ಉತ್ತಮ ಪುರುಷ (ಸಿ)ಮಧ್ಯಮ ಪುರುಷ (ಡಿ) ಅನ್ಯಪುರುಷ

೩೭. ' ತಾರೀಕು ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ

(ಎ) ಪೋರ್ಚುಗಿ ೀಸ್ (ಬಿ) ಉರ್ದು (ಸಿ) ಫಾರ್ಸಿ (ಡಿ) ) ಯವುದೂ ಅಲ್ಲ

೩೮.ಕಂದ ಪದ್ಯ ದಲ್ಲಿರುವ ಪಾದಗಳ ಸಂಖ್ಯೆ

(ಎ) ೩ (ಬಿ)೪ (ಸಿ) ೫ (ಡಿ) ೬

೩೯. ' ಅನ್ವಯ ' ಇದರ ಅರ್ಥ

(ಎ) ಅಂಶ (ಬಿ)ವಂಶ (ಸಿ)ಕಂಸ (ಡಿ)ಅನುವು

೪೦. ರಾಧೆಗಿಂತ ಇಲ್ಲಿರುವ ತದ್ಧಿತ ಪ್ರತ್ಯಯ

(ಎ) ಇಂತ (ಬಿ) ರಾದೆ (ಸಿ)ಇಂದ (ಡಿ) ) ಯವುದೂ ಅಲ್ಲ

Scanned by CamScanner

ಇ)ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪ * ३ = ೧೨

೨೦. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?

೨೧. "ಹೊತ್ತು ! ಹೊತ್ತು ! ಹೊತ್ತೇ ಹಣ."

೨೨. " ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ."

೨೩. "ನಿನ್ನಪದೆಸೆಯ ಬಯಸುವನಲ್ಲ"

ಈ) ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. ೨*೩ =೬

೨೪. ಸಾರಾ ಅಬೂಬಕ್ಕರ್

೨೫ ಅಂಬಿಕಾತನಯದತ್ತ

ಉ) ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ ೧ * ೪ = ೪

೨೬. ನೀಲಮೇಘಮಂಡಲ-ಸಮ ಬಣ್ಣ

____________________________

____________________________

____________________________

ಹಕ್ಕಿ ಹಾರುತಿದೆ ನೋಡಿದಿರಾ?

ಅಥವಾ

ಯುಗ-ಯುಗಗಳ ಹಣೆಬರೆಹವಒರಸಿ

____________________________

____________________________

____________________________

ಹಕ್ಕಿ ಹಾರುತಿದೆ ನೋಡಿದಿರಾ?

ಊ) ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.
೧ * ೪ = ೪

೨೭. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ.
ಮನುಜರ ನಡುವಿಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ.

ಋ) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨ * ೪ = ೮

೨೮. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಅಥವಾ

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

೨೯. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

ಅಥವಾ

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

Scanned by CamScanner